ಗೋದಾನ, ಭೂದಾನ ಮೊದಲಾದವುಗಳೊಂದಿಗೆ ಆಗಲೇಬೇಕೆಂದು ಪಟ್ಟು ಹಿಡಿದರು. ಅಷ್ಟಿಷ್ಟು ವಾದ ವಿವಾದಗಳಾಗಿ ಪೂಜಾರಪ್ಪನವರು ಜಗ್ಗದಿದ್ದಾಗ ಇತರರು ಒಪ್ಪಿಕೊಂಡರು. ಖರ್ಚಿನ ಮಾತು ಬಂದಿತು. ಹಿಂದಿನ ಬಾರಿ ಅದಕ್ಕೆಲ್ಲ ನಾಲ್ಕು ಸಾವಿರ ಚಿಲ್ಲರೆಯಾಗಿತ್ತೆಂದು ಸೆಟ್ಟರು ತಿಳಿಸಿದ ಮೇಲೆ ಈಗ ಧಾರಣೆವಾಸಿ ನಾಲ್ಕೈದು ಪಟ್ಟು ಹೆಚ್ಚಾಗಿದೆಯೆಂಬ ಲೆಖ್ಖದಮೇಲೆ ಈಗಿನ ವೆಚ್ಚ ಸುಮಾರು ಇಪ್ಪತ್ತು ಸಾವಿರವಾದೀತೆಂದು ಅಂದಾಜು ಮಾಡಲಾಯಿತು. ಇದರ ಹಂಚಿಕೆ ಯಾರು ಯಾರ ಮೇಲೆ ಎಷ್ಟೆಷ್ಟು ಬೀಳಬೇಕು, ಊರಿನ ಮಹಾಜನರಿಂದ ಚಂದಾಹಣವನ್ನೆಷ್ಟು ಎತ್ತಬೇಕು ಎಂದು ಬಹಳಹೊತ್ತು ಚರ್ಚೆ ನಡೆಯುತ್ತಿತ್ತು. ಬಿಸಿ ಏರುತ್ತಿತ್ತು.

'ಸಾವ್ಕಾರ್ರೆ! ಸಾವ್ಕಾರ್ರೆ!' ಗ್ರಾಮಸ್ಥನೊಬ್ಬ ಓಡೋಡಿಕೊಂಡು ಕೂಗುತ್ತ ಏದುತ್ತ ಬಂದ. ಅವನ ಕಣ್ಣು ಅಗಲವಾಗಿ ಗುಡ್ಡೆ ಹೊರಬಂದಂತೆ ಕಾಣುತ್ತಿತ್ತು.

'ಏನೋ?' ಸಾಹುಕಾರರು ಚರ್ಚೆಯನ್ನು ನಿಲ್ಲಿಸಿ ಅವನ ಕಡೆಗೆ ತಿರುಗಿದರು. ಇತರರೂ. ಬಂದವನಿಂದ ಮಾತು ಹೊರಡಲಿಲ್ಲ.

'ಏನೋ, ದೆವ್ವ ಹಿಡಿದೋನ ಹಾಗಿದ್ದೀಯಲ್ಲೋ ಏನಾಯ್ತು ನಿನಗೆ?'

'ಸಾವ್ಕಾರ್ರೆ ಆ ಕಳ್ಳ ಮೂಗ...' ಮತ್ತೆ ಮಾತು ನಿಂತಿತು.

'ಹುಂ, ಏನು ಅವನು? ಹೇಳಬಾರ್ದೆ?'

'ಹೋಗ್ ಬುಟ್ಟ...'

'ಆ! ಏನಂದೇ? ಹೋಗಿಬಿಟ್ಟ! ಎಲ್ಲಿಗೆ? ಹೇಗೆ ತಪ್ಪಿಸಿಕೊಂಡ?'

'ತಪ್ಪಸ್ಕಳ್ಲಿಲ್ಲ ಸಾವ್ಕಾರ್ರೆ, ಮತ್ತೆ ಮತ್ತೆ...'

'ಮತ್ತೇನೋ?' ಯಾರು ಬಿಡಿಸಿದೋರು ಆ ಚಂಡಾಲನ್ನ? ಅವರಿಗೇನೋ ಗ್ರಹಚಾರ.'

'ಯಾರೂ ಇಲ್ಲ ಸಾವ್ಕಾರ್ರೆ...'

'ಯಾರು ಇಲ್ಲ, ಮತ್ತೇನೋ? ಸರಿಯಾಗಿ ಬೊಗಳಬಾರದೇನೋ?'

'ಹೋಗ್ ಬುಟ್ಟವನೆ...'

'ಎಲಾ ಮತ್ತೆ ಅದೇ ನೋಡು.'

'ಹೋಗ್‌ಬುಟ್ಟವ್ನೆ ಸಾವ್ಕಾರ್ರೆ– ದ್ಯಾವ್ರು, ನಮ್ ನವನೀತ್‌ಸಾಮಿ ಪಾದಕ್ಕೇ.'

'ಏನೋ ಅದು– ತೀರಿಕೊಂಡನೇನೋ?'

'ಹುಂ ಸಾವ್ಕಾರ್ರೆ.'

'ಹಾಗೆ ಹೇಳೋದಕ್ಕೆ ಏನು ಬಂದಿತ್ತು ಮೊದಲೇ? ಹುಂ... ಹೇಗೆ ಗೊತ್ತು ನಿಂಗೆ? ಸರಿಯಾಗಿ...'

'ಹುಂ ಸಾವ್ಕಾರ್ರೆ. ಮೆರ್ವಣ್ಗೆ ಆದಮ್ಯಾಲೆ ಹಟ್ಟೀಗ್‌ಹ್ವಾಗಿ ಹಿಟ್ ತಿನ್ಕಂಡು ಹ್ವಾದೆ ಗುಡಿಗೆ. ನೋಡದ್ರೆ ನಿಂತವನು ನಿಂತಂಗೇ ಅವ್ನೆ. ತಲೆ ಬಿದ್ದೈತೆ ಎದೆಮ್ಯಾಲೆ. ಹತ್ರ ಹ್ವಾಗಿ ಬಗ್ಗಿ ನೋಡದ್ರೆ ಉಸ್ರೆನಿಂತೋಗೈತೆ.'

'ಹೂಂ....' ಸಾಹುಕಾರರು ಕ್ಷಣಕಾಲ ಸುಮ್ಮನಿದ್ದರು... 'ಇರಲಿ ಹೋಗು, ತಡಿ ಆ ತಳವಾರನ್ನೂ ತೋಟೀನೂ ಬರಹೇಳು, ನಾನು ಹೇಳಿದೆ ಅಂತ, ಹೋಗು ಬೇಗ' ಎಂದರು.

ಅವನು ಓಡಿಹೋದ.

ಸಾಹುಕಾರರು ಮನೆಯ ಬಾಗಿಲಿನಲ್ಲಿ ನಿಂತಿದ್ದ ಗಾಡಿಯಿಂದ ಬತ್ತದ ಮೂಟೆಗಳನ್ನು ಇಳಿಸುತ್ತಿದ್ದ ಆಳನ್ನು ಕರೆದರು. 'ಜವರಾ, ಹೋಗು, ಬಾಕಿ ಆಳುಗಳು ಕೆಂಪ, ರಾಮ, ಲಿಂಗ ಎಲ್ಲಾರನ್ನೂ ಈಗಲೇ ಕರೆದುಕೊಂಡು ಬಾ. ಮೂಟೆ ಮಾತು ಆಮೇಲೆ ಆಗಲಿ' ಎಂದು ಅಪ್ಪಣೆ